# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1308 |
| 2 | ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | 17.12.2025 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನೆರೆಯ ಕೇರಳ ಮತ್ತು ಇತರ ರಾಜ್ಯಗಳ ಹಲವಾರು ಮಹಿಳೆಯರು ವಿವಾಹವಾದ ನಂತರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ನೆಲೆಸಿದ್ದು, ಇವರುಗಳಿಗೆ ರಾಜ್ಯದಲ್ಲಿ ಜಾತಿ ಪ್ರಮಾಣ ಪತ್ರ ಪಡೆಯಲು ಅವಕಾಶ ಇದೆಯೇ; | ನೆರೆಯ ಕೇರಳ ಮತ್ತು ಇತರೆ ರಾಜ್ಯಗಳ ಹಲವಾರು ಮಹಿಳೆಯರು ವಿವಾಹವಾದ ನಂತರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ನೆಲೆಸಿರುವ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಸಕಇ 225 ಬಿಸಿಎ 2000, ದಿನಾಂಕ:-30.03.2002 ರಲ್ಲಿ ನಿರ್ದಿಷ್ಟ ಪಡಿಸಿದ ಜಾತಿ ಪಟ್ಟಿಯಲ್ಲಿ ಇರುವ ಜಾತಿಗಳಿಗೆ ಸೇರಿದವರು ಪ್ರಮಾಣ ಪತ್ರ ಪಡೆಯಲು ಅವಕಾಶ ಇದೆ. |
| ಆ) | ಹೊರ ರಾಜ್ಯಗಳಿಂದ ಬಂದು ರಾಜ್ಯದಲ್ಲಿ ನಲೆಸಿರುವ ನಾಗರೀಕರು ಜಾತಿ ಪ್ರಮಾಣ ಪತ್ರ ಪಡೆಯಲು ಸಲ್ಲಿಸಬೇಕಾದ ದಾಖಲೆಗಳು ಯಾವುವು; ಸದರಿ ನಾಗರೀಕರಿಗೆ ಜಾತಿ ಪ್ರಮಾಣ ಪತ್ರ ವಿತರಿಸಲು ಅನ್ವಯವಾಗುವ ನಿಯಮಗಳು ಯಾವುವು: ರಾಜ್ಯದಲ್ಲಿ ಖಾಯಂ ಆಗಿ ನೆಲೆಸಿರುವ ಅನ್ಯ ರಾಜ್ಯದ ನಾಗರೀಕರು ಜಾತಿ ಪ್ರಮಾಣ ಪತ್ರ ಪಡೆಯಲು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೊರ ರಾಜ್ಯಗಳಿಂದ ಬಂದು ರಾಜ್ಯದಲ್ಲಿ ನೆಲೆಸಿರುವ ನಾಗರೀಕರು ಜಾತಿ ಪ್ರಮಾಣ ಪತ್ರ ಪಡೆಯಲು ಅರ್ಜಿಯೊಂದಿಗೆ, ಸ್ಥಳೀಯ ಗುರುತಿನ ಪುರಾವೆ, ವಿಳಾಸದ ದಾಖಲೆ, ಅರ್ಜಿದಾರರ ಪೋಷಕರು ತಮ್ಮ ವಲಸೆ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕಾಗುತ್ತದೆ.<br><br>ಸದರಿ ದಾಖಲೆ ಪತ್ರಗಳನ್ನು ಸಲ್ಲಿಸಿದ್ದಲ್ಲಿ, ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 44 ಎಜೆಎಸ್ 2021, ದಿನಾಂಕ:08-10-2021 ರಲ್ಲಿನ ನಿಯಮ / ಮಾನದಂಡಗಳನ್ವಯ ಜಾತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ.<br><br>ರಾಜ್ಯದಲ್ಲಿ ಖಾಯಂ ಆಗಿ ನೆಲೆಸಿರುವ ಅನ್ಯ ರಾಜ್ಯದ ನಾಗರೀಕರು ಜಾತಿ ಪ್ರಮಾಣ ಪತ್ರ ಪಡೆಯಲು ಯಾವುದೇ ಅಡೆತಡೆ ಉಂಟಾಗಿರುವುದಿಲ್ಲ. |
| ಇ) | ಕಳೆದ 3 ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಅನ್ಯ ರಾಜ್ಯದ ಮಹಿಳೆಯರು ಜಾತಿ ಪ್ರಮಾಣ ಪತ್ರ ಕೋರಿ ಸಲ್ಲಿಸಿದ ಅರ್ಜಿಗಳು ಎಷ್ಟು; ಜಾತಿ ಪ್ರಮಾಣ ಪತ್ರ ನೀಡಿದ ಮತ್ತು ತಿರಸ್ಕರಿಸಿದ ಅರ್ಜಿಗಳ ಸಂಖ್ಯೆ ಎಷ್ಟು; ತಿರಸ್ಕರಿಸಲು ಕಾರಣವೇನು; | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಅನ್ಯ ರಾಜ್ಯದ ಮಹಿಳೆಯರು ಎಂಬ ಬಗ್ಗೆ ಅಟಲ್ ಜೀ ತಂತ್ರಾಂಶದಲ್ಲಿ ಪ್ರತ್ಯೇಕವಾಗಿ ನಮೂದಿಸಿ ಅರ್ಜಿ ಸ್ವೀಕರಿಸಲು ಅವಕಾಶ ಇರುವುದಿಲ್ಲವಾದ್ದರಿಂದ ಅರ್ಜಿಗಳ ಸಂಖ್ಯೆ ಬಗ್ಗೆ ಮಾಹಿತಿ ನೀಡಲು ಸಾಧ್ಯವಾಗುವುದಿಲ್ಲ. |

<table>
<tr>
<td>ಈ)</td>
<td>2023-24ನೇ ಸಾಲಿನ ನಂತರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ತಿರಸ್ಕೃತ ಜಾತಿ ಪ್ರಮಾಣ ಪತ್ರ ಅರ್ಜಿಗಳ ಪೈಕಿ ಸಹಾಯಕ ಆಯುಕ್ತರಿಗೆ ಮೇಲ್ಮನವಿ ಕೋರಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು: ಸಹಾಯಕ ಆಯುಕ್ತರ ಆದೇಶದಂತೆ ವಿತರಿಸಿದ ಜಾತಿ ಪ್ರಮಾಣ ಪತ್ರಗಳೆಷ್ಟು: (ಜಾತಿ ವಿವರಗಳ ಸಹಿತ ತಾಲ್ಲೂಕುವಾರು ವಿವರ ನೀಡುವುದು)</td>
<td>2023-24ನೇ ಸಾಲಿನ ನಂತರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಾಯಕ ಆಯುಕ್ತರಿಗೆ ಮೇಲ್ಮನವಿ ಕೋರಿ ಸಲ್ಲಿಕೆಯಾದ ಅರ್ಜಿಗಳ ವಿವರವು ಈ ಕೆಳಕಂಡಂತಿದೆ.<br>
<table>
<tr><th>ಕ್ರ.ಸಂ</th><th>ಜಿಲ್ಲೆ</th><th>ತಾಲ್ಲೂಕು</th><th>ಸಹಾಯಕ ಆಯುಕ್ತರಿಗೆ ಮೇಲ್ಮನವಿ ಕೋರಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ</th><th>ಆದೇಶದಂತೆ ವಿತರಿಸಿದ ಜಾತಿ ಪ್ರಮಾಣ ಪತ್ರಗಳ ಸಂಖ್ಯೆ</th></tr>
<tr><td>1.</td><td rowspan="6">ದಕ್ಷಿಣ ಕನ್ನಡ</td><td>ಬೆಳ್ತಂಗಡಿ</td><td>1</td><td>1</td></tr>
<tr><td>2.</td><td>ಸುಳ್ಯ</td><td>1</td><td>1</td></tr>
<tr><td>3.</td><td>ಮಂಗಳೂರು</td><td>7</td><td>0</td></tr>
<tr><td>4.</td><td>ಬಂಟ್ವಾಳ</td><td>1</td><td>0</td></tr>
<tr><td>5.</td><td>ಮೂಡಬಿದ್ರು</td><td>1</td><td>0</td></tr>
<tr><td>6.</td><td>ಕಡಬ</td><td>2</td><td>2</td></tr>
</table>
<br>ಉಡುಪಿ ಜಿಲ್ಲೆಯಲ್ಲಿ ಯಾವುದೇ ಮೇಲ್ಮನವಿ ಕೋರಿಕೆ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ.</td>
</tr>
<tr>
<td>ಉ)</td>
<td>ರಾಜ್ಯದಲ್ಲಿ ಹಿಂದುಳಿದ ವರ್ಗಗಳಲ್ಲಿ ಬರುವ ಜಾತಿಗಳಿಗೆ ಪ್ರಸ್ತುತ ಇರುವ ಕೆನೆಪದರದ ಮಿತಿ ಎಷ್ಟು: ಸದರಿ ಮಿತಿಯನ್ನು ಯಾವ ವರ್ಷದಲ್ಲಿ ಅಳವಡಿಸಲಾಗಿದೆ: ಸದರಿ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ: ರಾಜ್ಯದಲ್ಲಿರುವ ಯಾವ ಇತರೆ ಹಿಂದುಳಿದ ವರ್ಗಗಳ ಜಾತಿಗಳಿಗೆ ಶೈಕ್ಷಣಿಕ ಮತ್ತು ಉದ್ಯೋಗಕ್ಕಾಗಿ ಮೀಸಲಾತಿ ಪಡೆಯಲು ಬೇರೆ ಬೇರೆ ಪ್ರವರ್ಗವನ್ನು ನಿರ್ಧರಿಸಲಾಗಿದೆ? (ಈ ಬಗ್ಗೆ ಸರ್ಕಾರಿ ಆದೇಶದ ಪ್ರತಿಯನ್ನು ನೀಡುವುದು)</td>
<td>ಸರ್ಕಾರದ ಆದೇಶ ಸಂಖ್ಯೆ:ಹಿಂವಕ 304 ಬಿಸಿಎ 2017, ದಿನಾಂಕ: 14.09.2018 ರಂತೆ ಕೆನೆಪದರ ನೀತಿಯ ವಾರ್ಷಿಕ ಆದಾಯ ಮಿತಿಯನ್ನು ರೂ.6.00 ಲಕ್ಷಗಳಿಂದ ರೂ.8.00 ಲಕ್ಷಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ. ಅದರಂತೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಕೆನೆ ಪದರ ನೀತಿ ಜಾರಿಯಲ್ಲಿರುತ್ತದೆ.<br><br>ಹಿಂದುಳಿದ ವರ್ಗಗಳ ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ ಮತ್ತು ಪ್ರವರ್ಗ-3ಬಿ ಪ್ರವರ್ಗಗಳಿಗೆ ವಾರ್ಷಿಕ ಆದಾಯವನ್ನು ರೂ.8.00 ಲಕ್ಷಗಳಿಂದ ರೂ.15.00 ಲಕ್ಷಗಳಿಗೆ ಹೆಚ್ಚಿಸುವ ಬಗ್ಗೆ ಮನವಿಗಳು ಸ್ವೀಕೃತವಾಗಿರುತ್ತವೆ. ಆದರೆ, ಪ್ರಸ್ತುತ ಆದಾಯದ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.<br><br>ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಶೈಕ್ಷಣಿಕ ಹಾಗೂ ಉದ್ಯೋಗಕ್ಕಾಗಿ ಮೀಸಲಾತಿಯನ್ನು ಸರ್ಕಾರದ ಆದೇಶ ಸಂಖ್ಯೆ:ಸಕಇ 225 ಬಿಸಿಎ 2000, ದಿನಾಂಕ:30-03-2002ರಲ್ಲಿ ಪ್ರವರ್ಗವಾರು ಈ ಕೆಳಕಂಡ ನಿಗದಿಪಡಿಸಲಾಗಿದೆ. (ಆದೇಶದ ಪ್ರತಿಯನ್ನು ಲಗತ್ತಿಸಿದೆ.)</td>
</tr>
</table>

| ಪ್ರವರ್ಗ | ಮೀಸಲಾತಿ ಪ್ರಮಾಣ ಶೇಖಡಾವಾರು |
|---|---|
| ಪ್ರವರ್ಗ-I | 4% |
| ಪ್ರವರ್ಗ-IIಎ | 15% |
| ಪ್ರವರ್ಗ-IIಬಿ | 4% |
| ಪ್ರವರ್ಗ-IIIಎ | 4% |
| ಪ್ರವರ್ಗ-IIIಬಿ | 5% |
| ಒಟ್ಟು | 32% |

**ಸಂಖ್ಯೆ:** ಕಂಇ 94 ಎಜೆಎಸ್ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು